ಹೆಚ್ಚುವರಿ ಟಿಕೆಟ್ ದರ ವಸೂಲಿ ಆರೋಪ: ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ ತೀರ್ಪು

ಉದಯಕಾಲ ನ್ಯೂಸ್ ಚಿಕ್ಕಮಗಳೂರು: ಹೆಚ್ಚುವರಿ ಪ್ರಯಾಣ ದರ ವಸೂಲು ಮಾಡಿದ ರಾಜ್ಯ ರಸ್ತೆ ಸಾರಿಗೆ ನಿಗಮದ ವಿರುದ್ಧ ತೀರ್ಪು ನೀಡಿದ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು ಹೆಚ್ಚುವರಿ ಟಿಕೆಟ್ ದರ 13.50 ರೂ.ಗಳನ್ನು ದೂರುದಾರರಿಗೆ ಹಿಂತಿರುಗಿಸುವುದಲ್ಲದೆ, ಪರಿಹಾರ 1 ಸಾವಿರ ರೂ. ಹಾಗೂ ವ್ಯಾಜ್ಯದ ಖರ್ಚು ಒಂದು ಸಾವಿರ ರೂ. ಒಟ್ಟು 2 ಸಾವಿರ ರೂ.ಗಳನ್ನು ನೀಡುವಂತೆ ಆದೇಶಿಸಿದೆ.

ಬಿಳೇಕಲ್ಲಳ್ಳಿ ಗ್ರಾಮದ ಎಸ್.ಆರ್.ಗಿರೀಶ್ ಕುಮಾರ್ ಹಾಗೂ ರಘುಪತೇಗೌಡ ಎಂಬುವವರು ಕಡೂರಿನಿಂದ ಸಖರಾಯಪಟ್ಟಣಕ್ಕೆ ತೆರಳುವ ಸಂದರ್ಭ ಬಸ್‌ನ ಚಾಲಕ ಕಂ ನಿರ್ವಾಹಕ ತಲಾ 33 ರೂ.ನಂತೆ ಇಬ್ಬರಿಂದ 66 ರೂ. ಪಡೆಯಬೇಕಿದ್ದ ಪ್ರಯಾಣ ದರಕ್ಕೆ ಬದಲಾಗಿ ಹೆಚ್ಚುವರಿಯಾಗಿ 20 ರೂ. ಸೇರಿ ಒಟ್ಟು 86 ರೂ. ಪಡೆದಿದ್ದರೆನ್ನಲಾಗಿದೆ. ಈ ಹಿನ್ನೆಲೆಯಲ್ಲಿ ನಿಗಮದ ಚಾಲಕ ಕಂ ನಿರ್ವಾಹಕ ಅನುಚಿತ ವ್ಯಾಪಾರ ಪದ್ಧತಿ ಅನುಸರಿಸಿರುವುದಾಗಿ ಎಸ್.ಆರ್.ಗಿರೀಶ್ ಕುಮಾರ್ ಆಯೋಗಕ್ಕೆ ದೂರು ಸಲ್ಲಿಸಿದ್ದರು.

ಈ ಹಿನ್ನೆಲೆಯಲ್ಲಿ ವಿಚಾರಣೆಗೆ ಆಯೋಗದ ಮುಂದೆ ವಿಚಾರಣೆಗೆ ಹಾಜರಾದ ಸಂದರ್ಭ ಹಾಸನಾಂಬ ಜಾತ್ರಾ ವಿಶೇಷವಾಗಿ ಸಂಚರಿಸುತ್ತಿದ್ದ ಈ ಬಸ್‌ನ ಟಿಕೆಟ್‌ನ ಮುದ್ರಿತ ಕೋಡ್ ಹಾಸನಾಂಬ ವಿಶೇಷ ಜಾತ್ರಾ ಪಾಯಿಂಟ್‌ನಿಂದ ಅಳವಡಿಸಿ ನೀಡಲಾಗಿದೆ. ಈ ವಿಶೇಷ ವಾಹನಗಳಿಗೆ ಹೆಚ್ಚುವರಿ ದರ ವಿಧಿಸಲು ನಿಗಮದ ಕೇಂದ್ರ ಕಚೇರಿಯ ಆದೇಶ ಮತ್ತು ಅನುಮೋದನೆಯಂತೆ ದರ ವಿಧಿಸಲಾಗಿದೆ ಎಂದು ಎದುರುದಾರ ವಿವರಣೆ ನೀಡಿದ್ದರು.

ಆದರೆ ಎದುರುದಾರರು ಸಲ್ಲಿಸಿದ ಸಾಕ್ಷ್ಯಾಧಾರ, ಪ್ರಶ್ನಾವಳಿ ಹಾಗೂ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಆಯೋಗವು ಸೇವಾ ನ್ಯೂನತೆ ಆಗಿರುವುದನ್ನು ಖಚಿತಪಡಿಸಿ ಈ ತೀರ್ಪು ನೀಡಿದೆ. ಹೆಚ್ಚುವರಿ ಟಿಕೆಟ್ ದರ 13.50 ರೂ., ಪರಿಹಾರ 1,000 ರೂ. ಹಾಗೂ ವ್ಯಾಜ್ಯ ವೆಚ್ಚ 1,000 ರೂ. ಗಳನ್ನು 45 ದಿನಗಳಲ್ಲಿ ನೀಡುವಂತೆ ಸೂಚಿಸಲಾಗಿದೆ. ತಪ್ಪಿದಲ್ಲಿ ತೀರ್ಪಿನ ಮೊತ್ತಕ್ಕೆ ಶೇ.12 ರಷ್ಟು ಬಡ್ಡಿಯನ್ನು ನೀಡಲು ಆದೇಶಿಲಾಗಿದೆ.

ಆಯೋಗದ ಅಧ್ಯಕ್ಷ ಎನ್.ಆರ್.ಚೆನ್ನಕೇಶವ, ಸದಸ್ಯರಾದ ಈ.ಪ್ರೇಮಾ ಮತ್ತು ಸಿ.ಹೆಚ್.ಸಮೀವುನ್ನಿಸಾ ಅಬ್ರಾರ್ ಈ ತೀರ್ಪು ನೀಡಿದ್ದಾರೆ.

ಶಿವಸೇನೆ ಆಶ್ರಯದಲ್ಲಿ ದತ್ತಮಾಲಾ ಅಭಿಯಾನ : ಗಂಗಾಧರ್ ಕುಲಕರ್ಣಿ

ಚಿಕ್ಕಮಗಳೂರು: ಶಿವಸೇನೆ ಕರ್ನಾಟಕದ ಆಶ್ರಯದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ದತ್ತಮಾಲಾ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶಿವಸೇನೆ ಕರ್ನಾಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಗಂಗಾಧರ್ ಕುಲಕರ್ಣಿ ತಿಳಿಸಿದರು.

ನಗರದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀ ದತ್ತಪೀಠ ಸೇವಾ ಸಮಿತಿ ಹಾಗೂ ಶಿವಸೇನೆ ವತಿಯಿಂದ ಅ.29 ರಿಂದ ನವೆಂಬರ್ 4ರವರೆಗೆ ದತ್ತಮಾಲಾ ಅಭಿಯಾನ ನಡೆಯಲಿದೆ ಎಂದರುದತ್ತಮಾಲಾ ಅಭಿಯಾನದಲ್ಲಿ ಭಕ್ತಾಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಅವರು ಮನವಿ ಮಾಡಿದರು.

ರಾಜ್ಯದಲ್ಲಿ ಶಿವಸೇನೆ ಅಸ್ತಿತ್ವಕ್ಕೆ ಬಂದು ಒಂದು ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ಸದಸ್ಯತ್ವ ಅಭಿಯಾನ ಹಮ್ಮಿಕೊಳ್ಳಲಾಗಿದೆ. ರಾಜ್ಯಾದ್ಯಂತ 50 ಲಕ್ಷ ಸದಸ್ಯರನ್ನು ಸೇರ್ಪಡೆಗೊಳಿಸುವ ಗುರಿ ಹೊಂದಲಾಗಿದೆ ಎಂದರು.

ರಾಜ್ಯದಲ್ಲಿ ತೀವ್ರ ಬರ ಪರಿಸ್ಥಿತಿ ನಿರ್ಮಾಣವಾಗಿದ್ದು, ಸಾಮಾನ್ಯ ಜನರು, ರೈತರು, ಕೃಷಿ ಕಾರ್ಮಿಕರು ಹಾಗೂ ಜಾನುವಾರುಗಳು ಸಂಕಷ್ಟಕ್ಕೆ ಸಿಲುಕಿವೆ. ಬರ ಪರಿಸ್ಥಿತಿಯನ್ನು ಎದುರಿಸುವಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಆರೋಪಿಸಿದ ಅವರು, ಸರ್ಕಾರದ ವಿರುದ್ಧ ಶಿವಸೇನೆ ವತಿಯಿಂದ ಪ್ರತಿಭಟನೆ ನಡೆಸಲಾಗುವುದು ಎಂದು ಹೇಳಿದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದು, ಉನ್ನತ ಪೊಲೀಸ್ ಅಧಿಕಾರಿಗಳು ನ್ಯಾಯಾಲಯದಿಂದ ಛೀಮಾರಿ ಹಾಕಿಸಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಿದರು. ಈದ್ ಮಿಲಾದ್ ಸಂದರ್ಭದಲ್ಲಿ ಬೆಂಗಳೂರು, ಚಿಕ್ಕಮಗಳೂರು, ಅಂಕೋಲಾ, ಕುಡಚಿ ಸೇರಿದಂತೆ ಹಲವು ಕಡೆ ನಡೆದ ಅಹಿತಕರ ಘಟನೆಗಳು ಇದಕ್ಕೆ ಸಾಕ್ಷಿಯಾಗಿವೆ ಎಂದರು.

ಕೆಪಿಎಸ್ಸಿ ಕರ್ಮಕಾಂಡದ ಕುರಿತು ಸಂಪೂರ್ಣ ತನಿಖೆ ನಡೆಸಬೇಕು. ಪ್ರಕರಣದಲ್ಲಿ ತಪ್ಪಿತಸ್ಥರು ಯಾರೇ ಆಗಿದ್ದರೂ ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವುದು ಅನಿವಾರ್ಯವಾಗಿದೆ ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಶಿವಸೇನೆ ಮಹಿಳಾ ಘಟಕದ ಅಧ್ಯಕ್ಷೆ ನವೀನಾ ರಂಜಿತ್, ಜಿಲ್ಲಾ ಕಾರ್ಯಧ್ಯಕ್ಷ ಜ್ಞಾನೇಂದ್ರ ಜೈನ್ , ಜಿಲ್ಲಾ ಕಾರ್ಯಾಧ್ಯಕ್ಷ ರಂಜಿತ್ ಶೆಟ್ಟಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಶರತ್ಕುಮಾರ್ ಗೋರೂರು, ಜಿಲ್ಲಾ ಕಾರ್ಯಧ್ಯಕ್ಷ ಕಾರ್ಯದರ್ಶಿ ವರುಣ್ ಕುಮಾರ್, ನಗರ ಯುವ ಘಟಕದ ವರುಣ್ ಕುಮಾರ್, ನಗರ ಆಧ್ಯಕ್ಷ ಅಭಿಷೇಕ್ ಉಪಸ್ಥಿತರಿದ್ದರು.

ದೊಡ್ಡ ಕನಸು, ಗುರಿ ಇಟ್ಟುಕೊಂಡು ಶಿಕ್ಷಣ ಪಡೆಯಿರಿ: ಶಾಸಕ ತಮ್ಮಯ್ಯ ಕರೆ

ಉದಯಕಾಲ ನ್ಯೂಸ್ ಚಿಕ್ಕಮಗಳೂರು: ವಿದ್ಯಾರ್ಥಿಗಳು ಸ್ವಾಮಿ ವಿವೇಕಾನಂದರ ಸಂದೇಶದಂತೆ ದೊಡ್ಡ ಕನಸು ಕಾಣುವುದರೊಂದಿಗೆ ಜೀವನದಲ್ಲಿ ದೊಡ್ಡ ಗುರಿಯನ್ನು ಇಟ್ಟುಕೊಂಡು ಮುನ್ನಡೆಯಬೇಕು ಎಂದು ಶಾಸಕ ಹೆಚ್.ಡಿ. ತಮ್ಮಯ್ಯ ಅವರು ಕರೆ ನೀಡಿದರು.

ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ದೇವನೂರು ಗ್ರಾಮದಲ್ಲಿರುವ ಲಕ್ಷ್ಮೀಶ ವಿದ್ಯಾ ನಿಕೇತನ ಆಂಗ್ಲ ಮಾಧ್ಯಮ ಶಾಲೆಯ ನೂತನ ಕೊಠಡಿಗಳನ್ನು ಸೋಮವಾರ ಉದ್ಘಾಟಿಸಿ ಅವರು ಮಾತನಾಡಿದರು.

ಕನಸು ಕಾಣಲು ಹಣ ಬೇಕಾಗಿಲ್ಲ, ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ದೊಡ್ಡ ಕನಸು ಕಾಣಬೇಕು. ಶಿಕ್ಷಣ ಸಂಸ್ಥೆಯಲ್ಲಿ ಉತ್ತಮವಾಗಿ ಕಲಿತು, ಜೀವನದಲ್ಲಿ ಉನ್ನತ ಸ್ಥಾನಕ್ಕೇರಿದಾಗ ಅದುವೇ ತಮಗೆ ಶಿಕ್ಷಣ ನೀಡಿದ ಸಂಸ್ಥೆಗೆ ಸಲ್ಲಿಸುವ ನಿಜವಾದ ಗೌರವವಾಗುತ್ತದೆ ಎಂದರು.

ಈ ಶಿಕ್ಷಣ ಸಂಸ್ಥೆಯ ನಿರ್ಮಾಣಕ್ಕೆ ಜಾಗ ದಾನ ನೀಡಿದ ಕೇಶವಮೂರ್ತಿ ಹಾಗೂ ಸಿದ್ದಯ್ಯ ಅವರ ಕುಟುಂಬದ ಕೊಡುಗೆಯನ್ನು ಸ್ಮರಿಸಿದ ಶಾಸಕರು, ಶಿಕ್ಷಣ ಸೇರಿದಂತೆ ಸಮಾಜದ ವಿವಿಧ ಕ್ಷೇತ್ರಗಳ ಅಭಿವೃದ್ಧಿಗೆ ಜಾಗ ಹಾಗೂ ಸಂಪನ್ಮೂಲಗಳನ್ನು ದಾನ ಮಾಡುವ ಪರಂಪರೆ ನಮ್ಮ ದೇಶದ ಸಂಸ್ಕೃತಿಯಲ್ಲಿದೆ ಎಂದು ಹೇಳಿದರು. ಚಿಕ್ಕಮಗಳೂರಿನ ಹಲವು ಪ್ರಮುಖ ಸಂಸ್ಥೆಗಳ ನಿರ್ಮಾಣದಲ್ಲೂ ದಾನಿಗಳ ಕೊಡುಗೆ ಇದೆ.

ಪಾಲಿಟೆಕ್ನಿಕ್ ಕಾಲೇಜು, ಸರ್ಕಾರಿ ಆಸ್ಪತ್ರೆ ಸೇರಿದಂತೆ ವಿವಿಧ ಸಾರ್ವಜನಿಕ ಸಂಸ್ಥೆಗಳಿಗೆ ದಾನಿಗಳು ಜಾಗ ನೀಡಿರುವುದನ್ನು ಉಲ್ಲೇಖಿಸಿದ ಅವರು, ಸಾರ್ವಜನಿಕ ಹಿತಕ್ಕಾಗಿ ಜಾಗ ದಾನ ಮಾಡಿದವರನ್ನು ಸದಾ ಗೌರವದಿಂದ ಸ್ಮರಿಸಬೇಕು ಎಂದರು.

ದಾನ ಮಾಡುವುದಷ್ಟೇ ಅಲ್ಲದೆ, ದಾನಿಗಳಿಂದ ಸಾರ್ವಜನಿಕ ಕಾರ್ಯಗಳಿಗೆ ನೆರವು ದೊರಕುವಂತೆ ಮಾಡುವವರ ಪಾತ್ರವೂ ಮಹತ್ವದ್ದಾಗಿದೆ. ಮೈಸೂರು ಸಂಸ್ಥಾನದ ಕಾಲದಲ್ಲಿಯೂ ಸಾರ್ವಜನಿ ಕರಿಗೆ ಅನುಕೂಲವಾಗುವ ಆಸ್ಪತ್ರೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಜಾಗ ಹಾಗೂ ನೆರವು ದೊರಕಿಸಲು ಹಲವರು ಪ್ರಯತ್ನಿಸಿದ್ದರು ಎಂದು ಅವರು ಸ್ಮರಿಸಿದರು.

ಜನರ ಆಶೀರ್ವಾದ: ಕ್ಷೇತ್ರದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳನ್ನು ತಮ್ಮ ವೈಯಕ್ತಿಕ ಸಾಧನೆ ಎಂದು ಹೇಳಿಕೊಳ್ಳಲು ಇಚ್ಛಿಸುವುದಿಲ್ಲ, ಕ್ಷೇತ್ರದ ಗುರುಹಿರಿಯರು, ಮತದಾರರು ಹಾಗೂ ಜನರು ನೀಡಿದ ಆಶೀರ್ವಾದದಿಂದ ಜನಪ್ರತಿನಿಧಿಯಾಗಿ ಕೆಲಸ ಮಾಡುವ ಅವಕಾಶ ದೊರೆತಿದೆ. ಜನರ ಸಹಕಾರ ಮತ್ತು ಸರ್ಕಾರದ ಅನುದಾನದ ಮೂಲಕವೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾಗಿದೆ ಎಂದು ಶಾಸಕ ಹೆಚ್.ಡಿ. ತಮ್ಮಯ್ಯ ಅವರು ಹೇಳಿದರು.

ಜನಪ್ರತಿನಿಧಿಗಳು ಯಾವುದೇ ಕೆಲಸವನ್ನು ತಮ್ಮ ವೈಯಕ್ತಿಕ ಸಾಧನೆ ಎಂದು ಬಿಂಬಿಸಿಕೊಳ್ಳದೆ, ಅದರ ಹಿಂದೆ ಇರುವ ಜನರ ಆಶೀರ್ವಾದ ಹಾಗೂ ಸರ್ಕಾರದ ಸಹಕಾರವನ್ನು ಗುರುತಿಸಬೇಕು. ಕ್ಷೇತ್ರದ ಅಭಿವೃದ್ಧಿಗೆ ದೊರೆಯುವ ಪ್ರತಿಯೊಂದು ಅವಕಾಶವನ್ನೂ ಜನರ ಕಲ್ಯಾಣಕ್ಕೆ ಬಳಸಿಕೊಳ್ಳಬೇಕು ಎಂದರು.

ಪಿಟಿಸಿಎಲ್ ಕಾಯ್ದೆ ಉಲ್ಲಂಘನೆ ನಿರ್ಲಕ್ಷ್ಯ ವಹಿಸುವ ಅಧಿಕಾರಿಗಳ ವಿರುದ್ಧ ಕ್ರಮ

ಉದಯಕಾಲ ನ್ಯೂಸ್ ಚಿಕ್ಕಮಗಳೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಪಿಟಿಸಿಎಲ್) ಜಮೀನುಗಳಿಗೆ ಸಂಬಂಧಿಸಿದಂತೆ ಸಹಾಯಕ ಆಯುಕ್ತರ (ಎಸಿ) ಆದೇಶವಾದ ತಕ್ಷಣವೇ ಸಂತ್ರಸ್ತರಿಗೆ ಜಮೀನಿನ ಸ್ವಾಧೀನ ನೀಡಬೇಕು. ಈ ಪ್ರಕ್ರಿಯೆಯಲ್ಲಿ ಅನಗತ್ಯ ವಿಳಂಬ ಧೋರಣೆ ತೋರುವ ಮತ್ತು ನಿರ್ಲಕ್ಷ್ಯ ವಹಿಸುವ ಅಧಿಕಾರಿಗಳ ವಿರುದ್ಧ ಗಂಭೀರ ಕ್ರಮ ಕೈಗೊಳ್ಳಲಾಗುವುದು ಎಂದು ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷ ಡಾ. ಎಲ್. ಮೂರ್ತಿ ಎಚ್ಚರಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಒಂಬತ್ತು ತಾಲೂಕುಗಳಲ್ಲಿ ಬಯಲುಸೀಮೆ ಹಾಗೂ ಮಲೆನಾಡು ಭಾಗದ ಸಮಸ್ಯೆಗಳು ಭಿನ್ನವಾಗಿವೆ. ಬಯಲುಸೀಮೆಯಲ್ಲಿ ಜಮೀನು ಹಕ್ಕುಗಳ ಸಮಸ್ಯೆಯಿದ್ದರೆ, ಮಲೆನಾಡಿನಲ್ಲಿ ಅರಣ್ಯ ಭೂಮಿ ಹಾಗೂ ಹಕ್ಕುಪತ್ರದ ತೊಡಕುಗಳು ಹೆಚ್ಚಾಗಿವೆ. ಮಂಗಳವಾರ ನಡೆದ ಸಭೆಯಲ್ಲಿ ಸುಮಾರು 200ಕ್ಕೂ ಹೆಚ್ಚು ಮುಖಂಡರು ಭಾಗವಹಿಸಿದ್ದು, 98ಕ್ಕೂ ಹೆಚ್ಚು ಗಂಭೀರ ಸ್ವರೂಪದ ಅರ್ಜಿಗಳು ಸಲ್ಲಿಕೆಯಾಗಿವೆ ಎಂದು ತಿಳಿಸಿದರು.

ಸಾಗುವಳಿ ಚೀಟಿ ಅಥವಾ ಓಎಂ ರಿಜಿಸ್ಟರ್‌ನಲ್ಲಿ ಎಸ್‌ಸಿ, ಎಸ್‌ಟಿ ಫಲಾನುಭವಿಗಳ ಹೆಸರಿದ್ದರೆ, ಆ ಜಮೀನು ಅವರಿಗೆ ಸೇರಿದ್ದು ಎಂಬುದು ಸುಪ್ರೀಂ ಕೋರ್ಟ್ ಹಾಗೂ ಸರ್ಕಾರದ ಸ್ಪಷ್ಟ ಆದೇಶವಾಗಿದೆ. ಪಿಟಿಸಿಎಲ್ ಕಾಯ್ದೆಯಡಿ ಪ್ರಕರಣ ನಿರ್ಣಯಿಸುವ ಪೂರ್ಣ ಅಧಿಕಾರ ಸಹಾಯಕ ಆಯುಕ್ತರಿಗೆ (ಎಸಿ) ಹಾಗೂ ಮೇಲ್ಮನವಿ ಅಧಿಕಾರ ಜಿಲ್ಲಾಧಿಕಾರಿಗೆ (ಡಿಸಿ) ಇದೆ. ಆದರೆ, ಎಸಿ ನ್ಯಾಯಾಲಯದಲ್ಲಿ ಆದೇಶವಾದ ಮೇಲೆಯೂ ಅಧಿಕಾರಿಗಳು ಇಲಾಖಾ ಹಂತದಲ್ಲಿ ತಿಂಗಳುಗಟ್ಟಲೆ ಸ್ವಾಧೀನ ನೀಡದೆ ವಿಳಂಬ ಮಾಡುತ್ತಿದ್ದಾರೆ. ಈ ವಿಳಂಬದ ಲಾಭ ಪಡೆದು ಎದುರುದಾರರು ಕೋರ್ಟ್‌ನಿಂದ ತಡೆಯಾಜ್ಞೆ ತರುತ್ತಿದ್ದಾರೆ. ಇದರಿಂದ ಬಡವರಿಗೆ ನ್ಯಾಯ ಸಿಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನೆಕ್ಕುಂಟಿ ರಾಮಲಕ್ಷ್ಮೀ' ಪ್ರಕರಣದ ಹೈಕೋರ್ಟ್ ಆದೇಶವನ್ನು ನೆಪವಾಗಿಟ್ಟುಕೊಂಡು ಕೆಲವು ಅಧಿಕಾ ರಿಗಳು ಪರಿಪಕ್ವವಾಗಿ ಯೋಚಿಸದೆ ಪಿಟಿಸಿಎಲ್ ಕಾಯ್ದೆ ಯನ್ನು ಉಲ್ಲಂಘಿಸುತ್ತಿದ್ದಾರೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಅವರು ಪ್ರತಿಪಾದಿಸಿದರು.

ಫಾರಂ ನಂ. 50, 53, 57 ಹಾಗೂ 54ರಡಿ ಸಾಗುವಳಿ ಚೀಟಿಗಾಗಿ ಅರ್ಜಿ ಸಲ್ಲಿಸಿ 20 ವರ್ಷಗಳಿಂದ ಜಮೀನು ಸ್ವಾಧೀನದಲ್ಲಿದ್ದರೂ ಬಡ ರೈತರಿಗೆ ಇನ್ನೂ ಹಕ್ಕುಪತ್ರ ಸಿಕ್ಕಿಲ್ಲ. ವಿಶೇಷವಾಗಿ ಮಲೆನಾಡು ಭಾಗದಲ್ಲಿ ಸಾವಿರಾರು ಇಂತಹ ಅರ್ಜಿಗಳು ಬಾಕಿ ಉಳಿದಿವೆ.

ಸಮಸ್ಯೆ ಇತ್ಯರ್ಥಪಡಿಸಲು ಜಿಲ್ಲಾ ಮಟ್ಟದಲ್ಲಿ ವಿಶೇಷ ಕಮಿಷನ್ ರಚನೆ ಮಾಡುವ ಅಗತ್ಯವಿದೆ ಎಂದು ಅವರು ಅಭಿಪ್ರಾಯಪಟ್ಟರು.

ಬೆಳಿಗ್ಗೆಯೇ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರೊಂದಿಗೆ ಸುದೀರ್ಘ ಚರ್ಚೆ ನಡೆಸಲಾಗಿದ್ದು, ಬಾಕಿ ಇರುವ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಶಿಸ್ತಿನ ಸೂಚನೆ ನೀಡಲಾಗಿದೆ ಎಂದು ಡಾ.ಮೂರ್ತಿ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಸದಸ್ಯರುಗಳಾದ ಎಂ.ಕುಂಬಯ್ಯ, ಸುನೀಲ್ ಎಂ.ಉಕ್ಕಲಿ, ಎನ್.ದಿವಾಕರ್ ಮತ್ತು ಗೀತಾ ಥಾಂವಶಿ ಹಾಗೂ ಕಾರ್ಯದರ್ಶಿ ಡಾ.ಹೆಚ್.ಎಸ್.ಶಿವರಾಮು ಉಪಸ್ಥಿತರಿದ್ದರು.

ಪೌರ ಕಾರ್ಮಿಕರ ಸಮಸ್ಯೆ ಬಗೆಹರಿಸಲು ಸಚಿವರಿಗೆ ಕಾಂಗ್ರೆಸ್ ಮುಖಂಡ ಭರತ್ ಮನವಿ

ಉದಯಕಾಲ ನ್ಯೂಸ್ ಚಿಕ್ಕಮಗಳೂರು: ನಗರಸಭೆಯ ಪೌರ ಕಾರ್ಮಿಕರು ಹಲವಾರು ಸಮಸ್ಯೆಗಳಿಂದ ಬಳಲುತ್ತಿದ್ದು, ಆದಷ್ಟು ಬೇಗ ಅವರ ಸಮಸ್ಯೆಗಳನ್ನು ಬಗೆಹರಿಸುವಂತೆ ಬಂದರು ಮತ್ತು ಒಳನಾಡು ಸಾರಿಗೆ ಹಾಗೂ ಮುಜರಾಯಿ ಸಚಿವರಾದ ಬಸಂತಪ್ಪ ಅವರನ್ನು ಕಾಂಗ್ರೆಸ್ ಮುಖಂಡ ಉಪ್ಪಳ್ಳಿ ಕೆ.ಭರತ್ ಒತ್ತಾಯಿಸಿದ್ದಾರೆ.

ಅವರು ಈ ಕುರಿತು ಮನವಿ ಸಲ್ಲಿಸಿ ಮಾತನಾಡಿ, ಚಿಕ್ಕಮಗಳೂರು ನಗರಸಭೆ ವ್ಯಾಪ್ತಿಯಲ್ಲಿ 35 ವಾರ್ಡ್‌ಗಳಿದ್ದು, ಸುಮಾರು 1.50 ಲಕ್ಷ ಜನಸಂಖ್ಯೆ ಇರುತ್ತದೆ. ಈ ನಗರವನ್ನು ಸ್ವಚ್ಛಗೊಳಿಸಲು 187 ಪೌರ ಕಾರ್ಮಿಕರುಗಳಿದ್ದು, ಇವರಲ್ಲಿ 60 ಜನ ಅಧಿಕೃತವಾಗಿದ್ದು, ಇನ್ನುಳಿದ 127 ಜನರು ಹೊರಗುತ್ತಿಗೆ ಆಧಾರದ ಮೇಲೆ ನೇಮಕವಾಗಿದ್ದಾರೆ ಎಂದಿದ್ದಾರೆ.

ಇವರಲ್ಲಿ ಪ್ರತಿನಿತ್ಯ 20 ರಿಂದ 30 ಜನರು ಆರೋಗ್ಯ ಸಮಸ್ಯೆ ಮತ್ತು ಇನ್ನಿತರೆ ಸಮಸ್ಯೆಗಳಿಂದ ಕೆಲಸಕ್ಕೆ ಗೈರಾಗುತ್ತಾರೆ. ಆದಕಾರಣ ಇನ್ನು 30 ರಿಂದ 50 ಜನ ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಳಿಸಬೇಕು. ಇವರಿಗೆ ನಮ್ಮ ಕಾಂಗ್ರೆಸ್ ಸರ್ಕಾರವಿದ್ದ ಸಂದರ್ಭದಲ್ಲಿ ಅಂದರೆ 2013 ರಿಂದ 2018 ರ ಅಂದಿನ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಪೌರ ಕಾರ್ಮಿಕರಿಗೆ ಸುಸಜ್ಜಿತವಾದ ಮನೆಗಳನ್ನು ನಿರ್ಮಿಸಲು ಕಲ್ಲುದೊಡ್ಡಿ, ಶಾಂತಿನಗರದಲ್ಲಿ ಸುಮಾರು 74 ಮನೆಗಳನ್ನು ಮಂಜೂರು ಮಾಡಿದ್ದರು ಎಂದು ಹೇಳಿದ್ದಾರೆ.

ಈ ಮನೆಗಳ ಎಲ್ಲಾ ಹಣವು ಬಿಡುಗಡೆಯಾಗಿದ್ದು, ಫಲಾನುಭವಿಗಳಿಗೆ ಇನ್ನು ಹಸ್ತಾಂತರವಾಗಿಲ್ಲ. ಕಳೆದ 50 ವರ್ಷಗಳಿಂದ ಶಂಕರಪುರ ಬಡಾವಣೆಯಲ್ಲಿ ಪೌರ ಕಾರ್ಮಿಕರಿಗೆ ನೀಡಿರುವ ಮನೆಗಳ ಹಕ್ಕುಪತ್ರಗಳನ್ನು ನೀಡಿಲ್ಲ. ಈ ಬಡಾವಣೆಗಳಲ್ಲಿ ಹಲವು ಮೂಲಭೂತ ಸೌಕರ್ಯಗಳು ದೊರಕಬೇಕಿದೆ ಎಂದು ಮನವಿ ಮಾಡಿದ್ದಾರೆ.

ನಗರದ ಪೆನ್ಷನ್ ಮೊಹಲ್ಲಾ ಬಡಾವಣೆಯ ಪೌ ಕಾರ್ಮಿಕರ ಜನ ವಸತಿ ಕಾಲೋನಿಯನ್ನು ಕೂಡು ಮನೆಗಳಾಗಿ ಪರಿವರ್ತಿಸಿದಲ್ಲಿ ಅವಶ್ಯಕತೆ ಇರುವ ಹಾಗೂ ಇನ್ನುಳಿದ ಪೌರ ಕಾರ್ಮಿಕರಿಗೂ ಕೂಡ ಸುಸಜ್ಜಿತವಾದ ಮನೆಗಳನ್ನು ನೀಡಬಹುದಾಗಿದೆ. ಇನ್ನು ಹತ್ತಾರು ಪೌರ ಕಾರ್ಮಿಕರ ಸಮಸ್ಯೆಗಳಿರುವುದರಿಂದ ತಾವುಗಳು ಜಿಲ್ಲೆಗೆ ಆಗಮಿಸಿ ಖುದ್ದು ವೀಕ್ಷಿಸಿ ಈ ಸಮಸ್ಯೆಗಳಿಗೆ ಪರಿಹಾರ ನೀಡುವಂತೆ ವಿನಂತಿಸಿದ್ದಾರೆ.ಈ ಸಂದರ್ಭದಲ್ಲಿ ಕೆಪಿಸಿಸಿ ಕಾರ್ಮಿಕ ವಿಭಾಗದ ರಾಜ್ಯ ಕಾರ್ಯದರ್ಶಿ ಕೆ.ಸುನೀಲ್ ಕುಮಾರ್ ಇದ್ದರು.

ಕಸ್ತೂರಿ ರಂಗನ್ ವರದಿ ವಿರೋಧಿಸಿ ನಾಳೆ ಬೃಹತ್ ಪ್ರತಿಭಟನೆ

ಉದಯಕಾಲ ನ್ಯೂಸ್ ಬಾಳೆಹೊನ್ನೂರು: ಕಸ್ತೂರಿ ರಂಗನ್ ವರದಿ ಜಾರಿಯ ಅಧಿಸೂಚನೆಯನ್ನು ವಿರೋಧಿಸಿ ದಿನಾಂಕ 10 ರಂದು ಬಾಳೆಹೊನ್ನೂರಿನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಎನ್ ಆರ್ ಪುರ ಪಿಸಿಐಡಿ ಬ್ಯಾಂಕಿನ ಉಪಾಧ್ಯಕ್ಷ ಹಾಗೂ ಮಲ್ನಾಡು ಉಳಿಸಿ ಹೋರಾಟ ಸಮಿತಿಯ ಸದಸ್ಯ ಕೌಶಿಕ್ ಪಟೇಲ್ ತಿಳಿಸಿದ್ದಾರೆ.

ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿ ಮಾತನಾಡಿದ ಅವರು ಕರ್ನಾಟಕ ರಾಜ್ಯದ 20688 ಚದರ ಕಿಲೋಮೀಟರ್ ಹಾಗೂ ಮಲ್ನಾಡ್ ಪ್ರದೇಶದ 1449 ಗ್ರಾಮಗಳನ್ನು ಪರಿಸರ ಸೂಕ್ಷ್ಮ ವಲಯವೆಂದು ಘೋಷಿಸಲು ಕೇಂದ್ರ ಸರ್ಕಾರ 7ನೇ ಕರಡು ಅಧಿಸೂಚನೆ ಹೊರಡಿಸಿದೆ ಇದರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಮಲ್ನಾಡು ಭಾಗದ 137 ಹಳ್ಳಿಗಳನ್ನು ಸೇರಿಸಲಾಗಿದೆ. ಈ ಅಧಿಸೂಚನೆ ಜಾರಿಗೊಂಡರೆ ಸೂಕ್ಷ್ಮ ವಲಯದ ಕಠೋರ ಕಾಯ್ದೆಗಳಿಂದ ಜನಜೀವನ ಆತಂಗಕ್ಕೆ ಒಳಗಾಗುವ ಸಂಭವವಿದೆ ಗ್ರಾಮಗಳ ವಸತಿ ಪ್ರದೇಶ, ಕೃಷಿ ಭೂಮಿ, ಪಟ್ಟ ಭೂಮಿ ನೀರಿನ ಮೂಲ, ಗ್ರಾಮದ ರಸ್ತೆಗಳು ಮತ್ತಿತರ ಸೌಕರ್ಯಗಳು ಸೂಕ್ಷ್ಮ ವಲಯ ದಿಂದ ಹೊರಗಿಡದೆ ಇಡೀ ಗ್ರಾಮವನ್ನೇ ಸೂಕ್ಷ್ಮ ವಲಯವೆಂದು ಘೋಷಿಸಲಾಗಿದೆ.

ಗ್ರಾಮ ಸಭೆಯಲ್ಲಿ ಚರ್ಚಿಸದೆ ಗ್ರಾಮದ ಜನರ ಅಭಿಪ್ರಾಯವನ್ನು ಕೇಳದೆ ಅಧಿಸೂಚನೆ ಹೊರಡಿಸಿರುವುದು ಆತಂಕಕ್ಕೆ ಕಾರಣವಾಗಿದೆ ಹವಾ ನಿಯಂತ್ರಿತ ಕೊಠಡಿಯಲ್ಲಿ ಕುಳಿತು ಉಪಗ್ರಹ ಆಧಾರಿತ ಚಿತ್ರದ ಮೂಲಕ ಕಾಫಿ, ಕಾಳು ಮೆಣಸು, ಅಡಿಕೆ, ಬಾಳೆ, ತೆಂಗು ಮುಂತಾದ ಕೃಷಿ ಪ್ರದೇಶಗಳನ್ನು ಹಸಿರು ಅರಣ್ಯ ವೆಂದು ಗುರುತಿಸಿ ಪರಿಸರ

ಸೂಕ್ಷ್ಮ ವಲಯವನ್ನು ಮಾಡುತ್ತಿರುವುದಕ್ಕೆ ವಿರೋಧವಿದೆ ಮಲ್ನಾಡು ನೆಲವಾಸಿಗಳ ಬದುಕುವ ಹಕ್ಕನ್ನು ಕಿತ್ತುಕೊಳ್ಳುವ ದೋರಣೆ ಸಂವಿಧಾನ ವಿರೋಧಕ ಕಾರ್ಯವಾಗಿದೆ.

ಈ ನಿಟ್ಟಿನಲ್ಲಿ ಪುನಃ ಅರಣ್ಯ ಪ್ರದೇಶವನ್ನು ವೈಜ್ಞಾನಿಕವಾಗಿ ಸಮೀಕ್ಷೆ ಮಾಡಿ ಗ್ರಾಮ ಮತ್ತು ಸರ್ವೆ ನಂಬರ್ ಗಳನ್ನು ಮತ್ತು ಸರಿಯಾಗಿ ನಮೂದಿಸಿ ಹೊಸದಾದ ಅಧಿಸೂಚನೆಯನ್ನು ಹೊರಡಿಸಬೇಕಾಗಿ ಪತ್ರಿಕ ಹೇಳಿಕೆಯಲ್ಲಿ ತಿಳಿಸಿದ್ದಾ: ಗ್ರಾಮದ ಜನರ ಆತಂಕಕ್ಕೆ ಕಾರಣವಾದ ಈ ಅಧಿಸೂಚನೆಯನ್ನು ವಿರೋಧವಾಗಿ ಸಂಘಟಿತರಾಗಿ ಹೊರಡಬೇಕಾಗಿದೆ ಖಾಂಡ್ಯ ಹೋಬಳಿ, ಮೇಗುಂದ ಹೋಬಳಿ ಹಾಗೂ ಬಾಳೆಹೊನ್ನೂರು ಹೋಬಳಿಯ ಸಾವಿರಾರು ರೈತರು, ಕೃಷಿಕರು, ಕೂಲಿ ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗವಹಿಸಬೇಕೆಂದು ಕರೆ ನೀಡಿದ್ದಾರೆ.

ಬಳ್ಳಾರಿ ಪಾದಯಾತ್ರೆಯಲ್ಲಿ ಕಡೂರಿನ ಬಿಜೆಪಿ ಕಾರ್ಯಕರ್ತರು ಭಾಗಿ

ಉದಯಕಾಲ ನ್ಯೂಸ್ ಕಡೂರು: ರಾಜ್ಯ ಬಿಜೆಪಿ ಪಕ್ಷ ರಾಜ್ಯ ಸರ್ಕಾರದ ವಿರುದ್ಧ ಲಿಂಗಸಗೂರಿನಿಂದ ಬಳ್ಳಾರಿಯವರೆಗೆ ಹತ್ತು ದಿನಗಳ ಪಾದಯಾತ್ರೆಯಲ್ಲಿ ಏಳನೇ ದಿನದ ಸೋಮವಾರ ಕಡೂರು ಮಾಜಿ ಶಾಸಕ, ಅಪೆಕ್ಸ್ ಬ್ಯಾಂಕ್ ನಿರ್ದೇಶಕ ಬೆಳ್ಳಿ ಪ್ರಕಾಶ್ ನೇತೃತ್ವದಲ್ಲಿ 300ಕ್ಕೂ ಅಧಿಕ ಬಿಜೆಪಿ ಕಾರ್ಯಕರ್ತರು ರಾಜ್ಯ ಬಿಜೆಪಿ ಅಧ್ಯಕ್ಷರಾದ ವಿಜಯೇಂದ್ರ ಅವರೊಂದಿಗೆ ಹೆಜ್ಜೆ ಹಾಕಿದರು.

ಕಡೂರು ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರಿಗೆ ನಿಗದಿಗೊಳಿಸಿದ್ದ ಕಂಪ್ಲಿ ವಿಧಾನಸಭಾ ಕ್ಷೇತ್ರದ ಮೆಟ್ಟಿಯಿಂದ ಅಳೆದರೋಜಿಯವರೆಗೆ ಸುಮಾರು ಹತ್ತು ಕಿಲೋಮೀಟರ್ ಪಾದಯಾತ್ರೆಯಲ್ಲಿ ನಾಯಕರೊಂದಿಗೆ ಪಾಲ್ಗೊಂಡಿದ್ದರು. ಮಾಜಿ ಶಾಸಕ ಬೆಳ್ಳಿ ಪ್ರಕಾಶ್, ಚಿಕ್ಕಮಗಳೂರು ಜಿಲ್ಲಾ ಬಿಜೆಪಿ ಅಧ್ಯಕ್ಷ ದೇವರಾಜ್ ಶೆಟ್ಟಿ, ರಾಜ್ಯ ರೈತ ಮೋರ್ಚ ಪ್ರಧಾನ ಕಾರ್ಯದರ್ಶಿ ಕಲ್ಮುರುಡಪ್ಪ, ಕಡೂರು ಮಂಡಲ ಬಿಜೆಪಿ ಅಧ್ಯಕ್ಷ ದೇವಾನಂದ ಪಾದಯಾತ್ರೆಯಲ್ಲಿ ಭಾಗವಹಿಸಿದ್ದರು ಮುಖಂಡರುಗಳಾದ ಮಹೇಶ್ ಒಡೆಯರ್ ಸುದರ್ಶನ್, ದಾನಿ ಉಮೇಶ್, ಚಂದ್ರು, ಬಿಳುವಾಳ ಶೇಷಪ್ಪ, ಚೀಲನಹಳ್ಳಿ ಬಸವರಾಜ್, ಮಾರ್ಗದ ಮಧು ಸೇರಿದಂತೆ 300 ಕ್ಕೂ ಅಧಿಕ ಬಿಜೆಪಿ ಕಾರ್ಯಕರ್ತರು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ನಮ್ಮ ಪ್ರಕೃತಿ, ನಮ್ಮ ಉಸಿರು: ಕಳಸದಲ್ಲಿ 'ವಿ ಫಿಟ್ ಅಕಾಡೆಮಿ' ವಿದ್ಯಾರ್ಥಿಗಳಿಂದ ಸ್ವಚ್ಛತಾ ಕಾರ್ಯಕ್ರಮ

ಉದಯಕಾಲ ನ್ಯೂಸ್ ಕಳಸ: ನಮ್ಮ ಪ್ರಕೃತಿ, ನಮ್ಮ ಉಸಿರು ಎಂಬ ಅತ್ಯುನ್ನತ ಧ್ಯೇಯವಾಕ್ಯದೊಂದಿಗೆ ಕಳಸದ 'ವಿ ಫಿಟ್ ಅಕಾಡೇಮಿ'ಯ ವಿದ್ಯಾರ್ಥಿಗಳು ಭಾನುವಾರ ಪಟ್ಟಣದ ಪ್ರಮುಖ ಸಾರ್ವಜನಿಕ ಸ್ಥಳಗಳಾದ ದುಗ್ಗಪ್ಪನ ಕಟ್ಟೆ ಹಾಗೂ ಸಾಲುಮರದ ತಿಮ್ಮಕ್ಕ ಸಸ್ಯೋದ್ಯಾನದ ಸುತ್ತಮುತ್ತ ಸ್ವಚ್ಛತಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿದರು.

ವಿದ್ಯಾರ್ಥಿಗಳಿಗೆ ಪರಿಸರ ಜಾಗೃತಿ ಬಗ್ಗೆ ಮಾಹಿತಿ ನೀಡಲು ವಿದ್ಯಾರ್ಥಿಗಳನ್ನು ದುಗ್ಗಪ್ಪನ ಕಟ್ಟೆಗೆ ಕರೆದುಕೊಂಡು ಹೋದ ಸಂದರ್ಭದಲ್ಲಿ ಅಲ್ಲಿ ಪ್ರವಾಸಿಗರು ಹಾಗೂ ಸಾರ್ವಜನಿಕರು ಬಿಸಾಡಿದ್ದ ಖಾಲಿ ಬಾಟಲಿಗಳು, ಪ್ಲಾಸ್ಟಿಕ್ ಹಾಗೂ ಇನ್ನಿತರ ಕಸವನ್ನು ನೋಡಿ ವಿದ್ಯಾರ್ಥಿಗಳು ಸ್ವಚ್ಚತಾ ಕಾರ್ಯಕ್ಕೆ ಇಳಿದಿದ್ದರು.

ಓದಿ ಬುದ್ಧಿವಂತರಾದವರೇ ಬಾಟಲಿ–ತ್ಯಾಜ್ಯಗಳನ್ನು ಎಲ್ಲೆಂದರಲ್ಲಿ ಬಿಸಾಡಿ ಪರಿಸರ ಹಾಳುಗೆಡವುತ್ತಿರುವುದು ಖೇದಕರ. ಆದರೆ, ಅಂತಹ ತಪ್ಪುಗಳನ್ನು ತಿದ್ದಿ ಮುಂದಿನ ಪೀಳಿಗೆಯನ್ನು ಪ್ರತಿನಿಧಿಸುವ ಈ ಸಣ್ಣ ಮಕ್ಕಳು ಪರಿಸರ ನೈರ್ಮಲ್ಯಕ್ಕೆ ಮುಂದಾಗಿರುವುದು ಸಮಾಜದ ಕಣ್ಣು ತೆರೆಸುವಂತಿತ್ತು. ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಪ್ರಬೋಧಿನಿ ವಿದ್ಯಾಕೇಂದ್ರದ ಮುಖ್ಯ ಶಿಕ್ಷಕರಾದ ಆನಂದ್ ಅವರು ಮಾತನಾಡಿ, ವಿದ್ಯಾರ್ಥಿಗಳಿಗೆ ಕೇವಲ ಅಕ್ಷರ ಕಲಿಯುವುದಷ್ಟೇ ಪೂರ್ಣ ಶಿಕ್ಷಣವಲ್ಲ; ಅದರೊಂದಿಗೆ ಪರಿಸರವನ್ನು ಕಾಪಾಡುವ ಪ್ರಜ್ಞೆಯೂ ಇರಬೇಕು. ಸಾರ್ವಜನಿಕ ಸ್ಥಳಗಳಿಗೆ ಹೋದಾಗ ನಾವು ತೋರಿಸುವ ಶಿಸ್ತು ಮತ್ತು ಕಾಳಜಿ ನಮ್ಮ ವ್ಯಕ್ತಿತ್ವವನ್ನು ಬಿಂಬಿಸುತ್ತದೆ, ಎಂದು ಮಕ್ಕಳಿಗೆ ಕಿವಿಮಾತು ಹೇಳಿದರು.

ಕರಾಟೆ ತರಬೇತಿಯು ದೇಹವನ್ನು ದೃಢಗೊಳಿಸಿ, ಆತ್ಮರಕ್ಷಣೆ ಮತ್ತು ಆರೋಗ್ಯಕ್ಕೆ ಹೇಗೆ ಸಹಕಾರಿಯೋ, ಹಾಗೆಯೇ ಪರಿಸರ ನೈರ್ಮಲ್ಯವೂ ಪ್ರತಿಯೊಬ್ಬರ ಜೀವನದ ಮುಖ್ಯ ಭಾಗವಾಗಬೇಕು ಎಂಬುದನ್ನು ವಿ ಫಿಟ್ ಅಕಾಡೇಮಿಯ ವಿದ್ಯಾರ್ಥಿಗಳು ತಮ್ಮ ಈ ಕಾಯಕದ ಮೂಲಕ ಸಮಾಜಕ್ಕೆ ಗಟ್ಟಿಯಾಗಿ ಸಾರಿದ್ದಾರೆ.

---

equitas
SMALL FINANCE BANK LTD

ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ (ಈ ಮುಂಚೆ ಈಕ್ವಿಟಾಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ನೋಂದಾಯಿತ ಕಛೇರಿ : ನಂ.769, ಸ್ಪೆನ್ಸರ್ ಪ್ಲಾಝಾ, 4ನೇ ಮಹಡಿ, ಹಂತ–II, ಅಣ್ಣಾ ಸಲೈ, ಚೆನ್ನೈ, ತಮಿಳುನಾಡು–600 002.
044–42995000, 044–42995050

ಸ್ಥಿರಾಸ್ತಿಯ ಮಾರಾಟಕ್ಕಾಗಿ ಹರಾಜು ಮಾರಾಟದ ಸೂಚನೆ

ಅನುಬಂಧ IV-A [ನಿಯಮ 8(6) ರ ನಿಬಂಧನೆಯನ್ನು ನೋಡಿ] – ಸ್ಥಿರಾಸ್ತಿಗಳ ಮಾರಾಟದ ಸೂಚನೆ

2002 ರ ಹಣಕಾಸು ಆಸ್ತಿಗಳ ಸೆಕ್ಯೂರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಸೆಕ್ಯೂರಿಟಿ ಬಡ್ಡಿ ಜಾರಿ ಕಾಯ್ದೆಯಡಿ ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ಇ–ಹರಾಜು ಮಾರಾಟ ಸೂಚನೆಯನ್ನು ಭದ್ರತಾ ಬಡ್ಡಿ (ಜಾರಿ) ನಿಯಮಗಳು, 2002 ರ ನಿಯಮ 8 (6) ರ ನಿಬಂಧನೆಯೊಂದಿಗೆ ಓದಲಾಗಿದೆ. ಸಾರ್ವಜನಿಕರಿಗೆ ಮತ್ತು ವಿಶೇಷವಾಗಿ ಸಾಲಗಾರರು, ಅಡಮಾನದಾರರು ಮತ್ತು ಖಾತರಿದಾರರು (ಗಳು) ಗೆ ಸೂಚನೆ ನೀಡಲಾಗಿದೆ, ಈಕ್ವಿಟಾಸ್ ಸಣ್ಣ ಹಣಕಾಸು ಬ್ಯಾಂಕಿನ ಅಧಿಕೃತ ಅಧಿಕಾರಿ, ಸೆಕ್ಯೂರ್ಡ್ ಕ್ರೆಡಿಟರ್ ಅವರು ಸ್ವಾಧೀನಪಡಿಸಿಕೊಂಡಿರುವ ಸೆಕ್ಯೂರ್ಡ್ ಕ್ರೆಡಿಟ್‌ಗೆ ಮಾಂಟೇಜ್ ಮಾಡಲಾದ/ವಿಧಿಸಲಾದ ಕೆಳಗೆ ವಿವರಿಸಿದ ಸ್ಥಿರ ಆಸ್ತಿಯನ್ನು "ಎಲ್ಲಿ ಇದೆಯೋ ಹಾಗೆಯೇ", "ಏನಿದೆಯೋ ಹಾಗೆಯೇ" ಮತ್ತು "ಕೆಳಗೆ ತಿಳಿಸಲಾದ ಖಾತೆಗಳಲ್ಲಿ ಬಾಕಿಗಳನ್ನು ವಸೂಲಿ ಮಾಡಲು ಆಧಾರವಿದೆಯೋ ಅಲ್ಲಿ ಮಾರಾಟ ಮಾಡಲಾಗುತ್ತದೆ. ಸಾಲಗಾರರ (ರು) ಅಡಮಾನದಾರರು/ ಜಾಮೀನುದಾರರು/ ಸೆಕ್ಯೂರ್ಡ್ ಆಸ್ತಿಗಳ ಬಾಕಿಗಳ ಮೀಸಲು ಬೆಲೆ/ಇ–ಹರಾಜು ದಿನಾಂಕ ಮತ್ತು ಸಮಯ ಮತ್ತು ಬಿಡ್ ಹೆಚ್ಚಳ ಮೊತ್ತದ ವಿವರಗಳನ್ನು ಕೆಳಗೆ ಉಲ್ಲೇಖಿಸಲಾಗಿದೆ.

ಕ್ರ. ಸಂ.	ಸಾಲಗಾರರು/ ಅಡಮಾನದಾರರು/ ಜಾಮೀನುದಾರರ ಹೆಸರು ಮತ್ತು ವಿಳಾಸ	ತಿಳಿದಿರುವ ಹೊರೆಗಳನ್ನು ಹೊಂದಿರುವ ಸ್ಥಿರಾಸ್ತಿಗಳ ವಿವರಣೆ, ಯಾವುದಾದರೂ ಇದ್ದರೆ	ಮೀಸಲು ಬೆಲೆ ಇಎಂಡಿ ಬೆಲೆ ಬಿಡ್ ಹೆಚ್ಚಳ ಬೆಲೆ	ಹರಾಜಿನ ದಿನಾಂಕ ಮತ್ತು ಸಮಯ	ಸಾಲ / ಒಟ್ಟು ಬಾಕಿಗಳು
1	**ಪರಮೇಶ ಆರ್** **ನೇತ್ರಾವತಿ** (**ಇಬ್ಬರೂ ವಾಸ:** ವಾರ್ಡ್ ನಂ.20, ಅಶೋಕ ನಗರ ಬೀರೂರು, ಕಡೂರು, ಬೀರೂರು S.O – ದಕ್ಷಿಣ ಕರ್ನಾಟಕ, ಕರ್ನಾಟಕ – 577116).	ಈ ಕೆಳಕಂಡ ಸ್ಥಿರಾಸ್ತಿಯು: ಮೌಲ್ಯಮಾಪನ ಸಂಖ್ಯೆ: 4456/4310/ಎ, ಮೌಲ್ಯಮಾಪನ ಸಂಖ್ಯೆ: 16–512–85/1, ಅಶೋಕ ನಗರ, ಭೋವಿ ಕಾಲೋನಿ, ಬಿರೂರು ಪಟ್ಟಣ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆಯಲ್ಲಿದೆ. ಚಕ್ಕುಬಂದಿಗಳು: ಪೂರ್ವ–ಪಶ್ಚಿಮ 18.288037 ಮೀಟರ್‌ಗಳು, ಉತ್ತರ–ದಕ್ಷಿಣ 6.095702 ಮೀಟರ್‌ಗಳು; ಒಟ್ಟು ವಿಸ್ತೀರ್ಣ 111.477685 ಚದರ ಮೀಟರ್‌ಗಳು.	**ರೂ. 16,80,000/–** **ರೂ. 1,68,000/–** **ರೂ. 10,000/–**	15–10–2026 ರಂದು ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.30 ರವರೆಗೆ	ಸಾಲದ ಖಾತೆ ಸಂಖ್ಯೆ:– **700010173724 / 600000106984**. ದಿನಾಂಕ 26.06.2025 ರಂತೆ ಬಾಕಿ ಇರುವ ಕ್ಲೈಮ್ ಮೊತ್ತ ರೂ.14,10,490/–; ಇದರೊಂದಿಗೆ 27.06.2025 ರಿಂದ ಅನ್ವಯವಾಗುವಂತೆ ಮಾಸಿಕ ಬಡ್ಡಿ ಲೆಕ್ಕಾಚಾರದ ಆಧಾರದ ಮೇಲಿನ ಬಡ್ಡಿ, ಶುಲ್ಕಗಳು ಮತ್ತು ವೆಚ್ಚಗಳು ಇತ್ಯಾದಿ (ದಿನಾಂಕ 26.08.2026 ರಂತೆ ಒಟ್ಟು ಬಾಕಿ ಮೊತ್ತ ರೂ.18,99,822/–).
	ಖರೀದಿ ಮತ್ತು ಮಾರಾಟಕ್ಕೆ ಸಂಬಂಧಿಸಿದ ವಿವರಗಳು ಹಾಗೂ ವಿಚಾರಣೆಗಳಿಗಾಗಿ ಸಂಪರ್ಕಿಸಿ: ಸಂಗಮ ಎಚ್. ಎಸ್. – 9686451317, ದರ್ಶನ ಕೆ. ಎಂ. – 9611143773.				
2	**ಶ್ರೀ/ಶ್ರೀಮತಿ ವೆಂಕಟೇಶ್ C/O ಶ್ರೀ/ಶ್ರೀಮತಿ ಕಮಲಾಕರ್** **ಶ್ರೀ/ಶ್ರೀಮತಿ ಕಮಲಾಕರ C/O ಶ್ರೀ/ಶ್ರೀಮತಿ ಸೀನಪ್ಪ** **ಶ್ರೀ/ಶ್ರೀಮತಿ ಪ್ರೇಮಾ C/O ಶ್ರೀ/ಶ್ರೀಮತಿ ವೆಂಕಟೇಶ್** (**ಎಲ್ಲರೂ ವಾಸ:** ದೊಡ್ಡ ಸೀಗೆ ಒಬ್ಬಡೇಹಳ್ಳಿ, ಶಿವಮೊಗ್ಗ, ಒಬ್ಬಡೇಹಳ್ಳಿ, ಶಿವಮೊಗ್ಗ, ಕರ್ನಾಟಕ, 577227).	ಸ್ಥಿರ ಆಸ್ತಿ ಷೆಡ್ಯೂಲ್: ಇ–ಖಾತಾ ಸಂಖ್ಯೆ 152400102100400377, ಆಸ್ತಿ ಸಂಖ್ಯೆ 5; ಇದು ಶಿವಮೊಗ್ಗ ಜಿಲ್ಲೆ, ಭದ್ರಾವತಿ ತಾಲೂಕು, ಯೆಡೆಹಳ್ಳಿ ಗ್ರಾಮ ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದೆ. ಇದರ ಚಕ್ಕುಬಂದಿಗಳು: ಉತ್ತರಕ್ಕೆ – ನಿವೇಶನ ಸಂಖ್ಯೆ 4, ದಕ್ಷಿಣಕ್ಕೆ – ನಿವೇಶನ ಸಂಖ್ಯೆ 6, ಪೂರ್ವಕ್ಕೆ – ರಸ್ತೆ, ಪಶ್ಚಿಮಕ್ಕೆ – ಕೃಷಿ ಭೂಮಿ.	**ರೂ. 8,40,000/–** **ರೂ. 84,000/–** **ರೂ. 10,000/–**	15–10–2026 ರಂದು ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.30 ರವರೆಗೆ	ಸಾಲದ ಖಾತೆ ಸಂಖ್ಯೆ: **SEBDRVT0418197 / 200002403600.** 27.09.2025 ರಂದು ಬಾಕಿ ಇರುವ ಕ್ಲೈಮ್ ಮೊತ್ತ ರೂ.7,72,218/–; ಇದರೊಂದಿಗೆ 28.09.2025 ರಿಂದ ಅನ್ವಯವಾಗುವಂತೆ ಮಾಸಿಕ ಆಧಾರದ ಮೇಲಿನ ಬಡ್ಡಿ, ಶುಲ್ಕಗಳು ಮತ್ತು ವೆಚ್ಚಗಳು ಇತ್ಯಾದಿ (26.08.2026 ರಂದು ಒಟ್ಟು ಬಾಕಿ ಮೊತ್ತ ರೂ. 10,39,808/–).
	ಖರೀದಿ ಮತ್ತು ಮಾರಾಟಕ್ಕೆ ಸಂಬಂಧಿಸಿದ ವಿವರಗಳು ಹಾಗೂ ವಿಚಾರಣೆಗಳಿಗಾಗಿ ಇವರನ್ನು ಸಂಪರ್ಕಿಸಿ: ಭಾನುಪ್ರಕಾಶ್ ಆರ್: 8050632345, ದರ್ಶನ ಕೆ.ಎಂ.: 9611143773.				

ಖರೀದಿದಾರರು/ಬಿಡ್ಡರ್‌ಗಳು ಮುಂಗಡ ಹಣ ಠೇವಣಿ (ಇಎಂಡಿ) ಮೊತ್ತವನ್ನು ಎನ್‌ಇಎಫ್‌ಟಿ/ಆರ್‌ಟಿಜಿಎಸ್/ಡಿಡಿ ಮೂಲಕ "ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್" ಖಾತೆ ಸಂಖ್ಯೆ – 200000807725 ಮತ್ತು ಐಎಫ್‌ಎಸ್‌ಸಿ ಕೋಡ್– ESFB0001001, ಭಾಗ್ಯಮ್ ಗ್ಯಾಲೇರಿಯಾ ಹೊಸ ಸಂಖ್ಯೆ. 18, ಬರ್ಖುಲ್ಲಾ ರಸ್ತೆ, ಟಿ–ನಗರ, ಚೆನ್ನೈ–600 117, **ದಿನಾಂಕ: 14–10–2026** ರಂದು ಅಥವಾ ಅದಕ್ಕೂ ಮೊದಲು ಯಾವುದೇ ರಾಷ್ಟ್ರೀಕೃತ ಅಥವಾ ನಿಗದಿತ ಬ್ಯಾಂಕಿನಿಂದ ಡ್ರಾ ಮಾಡಲಾಗಿದೆ.
ಇ–ಹರಾಜು ಮಾರಾಟದ ನಿಯಮಗಳು ಮತ್ತು ಷರತ್ತುಗಳ ವಿವರಗಳಿಗಾಗಿ, ದಯವಿಟ್ಟು www.Equitasbank.in ಮತ್ತು https://www.bankeauctions.com ನಲ್ಲಿ ನೀಡಿರುವ ಲಿಂಕ್ ಅನ್ನು ನೋಡಿ.

ದಿನಾಂಕ: 09.09.2026, ಸ್ಥಳ: ಶಿವಮೊಗ್ಗ
ಸಹಿ/– ಅಧಿಕೃತ ಅಧಿಕಾರಿ, ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

ಐಡಿಎಫ್ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್

IDFC FIRST Bank

(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್, ಐಡಿಎಫ್ಸಿ ಬ್ಯಾಂಕ್ ಲಿಮಿಟೆಡ್ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂದು ಕರೆಯಲ್ಪಡುತ್ತದೆ) । ಸಿಐಎನ್: L65110TN2014PLC097792
ನೋಂದಾಯಿತ ಕಚೇರಿ: – KRM ಟವರ್ಸ್, 8 ನೇ ಮಹಡಿ, ಹ್ಯಾರಿಂಗ್ಟನ್ ರಸ್ತೆ, ಚೆಟ್ಪೇಟ್, ಚೆನ್ನೈ– 600031.
ದೂರವಾಣಿ: +91 44 4564 4000 । ಫ್ಯಾಕ್ಸ್: +91 44 4564 4022

ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯ್ದೆ, 2002 ರ ಸೆಕ್ಷನ್ 13 (2) ರ ಅಡಿಯಲ್ಲಿ ಸೂಚನೆ

ಈ ಕೆಳಗಿನ ಸಾಲಗಾರರು ಮತ್ತು ಸಹ–ಸಾಲಗಾರರು **ಐಡಿಎಫ್ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ನಿಂದ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್, ಐಡಿಎಫ್ಸಿ ಬ್ಯಾಂಕ್ ಲಿಮಿಟೆಡ್ನೊಂದಿಗೆ ವಿಲೀನಗೊಂಡು ಪ್ರಸ್ತುತ ಐಡಿಎಫ್ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂದು ಕರೆಯಲಾಗುತ್ತದೆ)** ಕೆಳಗೆ ತಿಳಿಸಲಾದ ಸುರಕ್ಷಿತ ಸಾಲಗಳನ್ನು ಪಡೆದುಕೊಂಡಿದ್ದಾರೆ. ಕೆಳಗೆ ತಿಳಿಸಲಾದ ಸಾಲಗಾರರು ಮತ್ತು ಸಹ–ಸಾಲಗಾರರ ಸಾಲಗಳನ್ನು ಅವರ ಆಯಾ ಆಸ್ತಿಗಳ ಅಡಮಾನದಿಂದ ಪಡೆಯಲಾಗಿದೆ. ಅವರು ಆಯಾ ಸಾಲ ಒಪ್ಪಂದಗಳ ನಿಯಮಗಳು ಮತ್ತು ಷರತ್ತುಗಳನ್ನು ಪಾಲಿಸಲು ವಿಫಲರಾಗಿರುವುದರಿಂದ ಮತ್ತು ಅನಿಯಮಿತವಾಗಿರುವುದರಿಂದ, ಅವರ ಸಾಲವನ್ನು ಆರ್‌ಬಿಐ ಮಾರ್ಗಸೂಚಿಗಳ ಪ್ರಕಾರ ಎನ್ಪಿಎ ಎಂದು ವರ್ಗೀಕರಿಸಲಾಗಿದೆ. **ಐಡಿಎಫ್ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ಗೆ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್, ಐಡಿಎಫ್ಸಿ ಬ್ಯಾಂಕ್ ಲಿಮಿಟೆಡ್ನೊಂದಿಗೆ ವಿಲೀನಗೊಂಡು ಪ್ರಸ್ತುತ ಐಡಿಎಫ್ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂದು ಕರೆಯಲಾಗುತ್ತದೆ)** ಅವರು ಪಾವತಿಸಬೇಕಾದ ಮೊತ್ತವನ್ನು ಈ ಕೆಳಗಿನ ಕೋಷ್ಟಕದಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾದ ಸಂಬಂಧಿತ ಸೂಚನೆಗಳ ಪ್ರಕಾರ ಉಲ್ಲೇಖಿಸಲಾಗಿದೆ ಮತ್ತು ಹೇಳಲಾದ ಮೊತ್ತಗಳ ಮೇಲಿನ ಹೆಚ್ಚಿನ ಬಡ್ಡಿಯೂ ಅನ್ವಯಿಸುತ್ತದೆ ಮತ್ತು ಆಯಾ ದಿನಾಂಕಗಳಿಂದ ಜಾರಿಗೆ ಬರುವ ಒಪ್ಪಂದದ ದರದ ಪ್ರಕಾರ ಅದನ್ನು ವಿಧಿಸಲಾಗುತ್ತದೆ.

ಕ್ರ.ಸಂ.	ಸಾಲದ ಖಾತೆ ಸಂಖ್ಯೆ.	ಸಾಲದ ವಿಧ	ಸಾಲಗಾರರು ಮತ್ತು ಸಹ–ಸಾಲಗಾರರ ಹೆಸರು	ವಿಭಾಗ 13 (2) ನೋಟಿಸ್ ದಿನಾಂಕ	ಸೆಕ್ಷನ್ 13 (2) ಸೂಚನೆಯ ಪ್ರಕಾರ ಬಾಕಿ ಮೊತ್ತ
1	102499126	ಗೃಹ ಸಾಲ	1. ಲಕ್ಷ್ಮೀದೇವಿ ಎಂ 2. ಮೈಗನ್ನಾ ಎಂ	19.08.2026	ರೂ 7,22,640.65/–
ಆಸ್ತಿ ವಿಳಾಸ: ಆಸ್ತಿಯ ಎಲ್ಲಾ ಭಾಗ ಮತ್ತು ವಿಭಾಗಗಳು ಇ–ಸ್ವತ್ತು ಸಂಖ್ಯೆ 151000300900300221, ಮನೆ ಪಟ್ಟಿ ಸಂಖ್ಯೆ 247, ವಿಸ್ತೀರ್ಣ 111.48 ಚದರ ಮೀಟರ್ (ಪೂರ್ವ–ಪಶ್ಚಿಮ: 9.14 ಮೀಟರ್ ಮತ್ತು ಉತ್ತರ–ದಕ್ಷಿಣ: 12.19 ಮೀಟರ್), ಕುರುಬರಹಳ್ಳಿ ಗ್ರಾಮದಲ್ಲಿದೆ, ಇಕ್ಕನೂರು ಗ್ರಾಮ ಪಂಚಾಯತ್, ತಾಲ್ಲೂಕು: ಹಿರಿಯೂರು, ಜಿಲ್ಲೆ: ಚಿತ್ರದುರ್ಗ, ಕರ್ನಾಟಕ–577511, ಮತ್ತು **ಗಡಿಗಳು:– ಪೂರ್ವ: ಸಣ್ಣಮ್ಮನ ಮನೆ ಪಶ್ಚಿಮ: ಖಾಲಿ ಜಾಗ ಉತ್ತರ: ರಸ್ತೆ ದಕ್ಷಿಣ: ಖಾಲಿ ಜಾಗ**					
2	108536484	ಆಸ್ತಿಯ ಮೇಲಿನ ಸಾಲ	1. ಸಿ ಕರಿಯಪ್ಪ 2. ರಾಜಮ್ಮ ಟಿ	13.08.2026	ರೂ 7,72,518.91/–
ಆಸ್ತಿ ವಿಳಾಸ: ಆಸ್ತಿಯ ಎಲ್ಲಾ ಭಾಗ ಮತ್ತು ವಿಭಾಗಗಳು ಇ–ಸ್ವತ್ತು ಸಂಖ್ಯೆ. 151000300500320042, ಮನೆ ಪಟ್ಟಿ ಸಂಖ್ಯೆ. 315, ವಿಸ್ತೀರ್ಣ 111.48 ಚದರ ಮೀಟರ್ (ಪೂರ್ವ–ಪಶ್ಚಿಮ: 9.14 ಮೀಟರ್ X ಉತ್ತರ–ದಕ್ಷಿಣ: 12.19 ಮೀಟರ್), ಉಪ್ಪಲಗೆರೆ ಗ್ರಾಮದಲ್ಲಿದೆ, ರಂಗನಾಥಪುರ ಗ್ರಾಮ ಪಂಚಾಯತ್, ತಾಲ್ಲೂಕು: ಹಿರಿಯೂರು, ಜಿಲ್ಲೆ: ಚಿತ್ರದುರ್ಗ, ಕರ್ನಾಟಕ–577511 ಮತ್ತು **ಗಡಿಗಳು: ಪೂರ್ವ: ಸಿ.ಕೆ. ರಾಮಕೃಷ್ಣಪ್ಪ ಅವರ ಭೂಮಿ ಪಶ್ಚಿಮ: ಸಿ.ಕೆ. ಗೌರಮ್ಮ ಅವರ ಭೂಮಿ ಉತ್ತರ: ಸಿ. ಪ್ರೇಮ ಅವರ ಭೂಮಿ ದಕ್ಷಿಣ: ರಸ್ತೆ**					
3	117542410	ಆಸ್ತಿಯ ಮೇಲಿನ ಸಾಲ	1. ನಾಗರಾಜ ಆರ್ 2. ಎಂ ರಾಮಕ್ಕ	13.08.2026	ರೂ 7,76,911.59/–
ಆಸ್ತಿ ವಿಳಾಸ: ಆಸ್ತಿಯ ಎಲ್ಲಾ ಭಾಗ ಮತ್ತು ವಿಭಾಗಗಳು ಆಸ್ತಿಯನ್ನು ಹೊಂದಿರುವ ಖಾತಾ ಸಂಖ್ಯೆ. 102, ಇ–ಸ್ವತ್ತು ಸಂಖ್ಯೆ. 151000303200620004, ಅಳತೆ: ಪೂರ್ವ–ಪಶ್ಚಿಮ 9.14 ಮೀಟರ್ X ಉತ್ತರ–ದಕ್ಷಿಣ 9.14 ಮೀಟರ್ = ಸಂಪೂರ್ಣವಾಗಿ 84.54 ಚದರ ಮೀಟರ್, ಮಲ್ಲರಸನಹಟ್ಟಿ ಗ್ರಾಮ, ಹಿರಿಯೂರು ತಾಲೂಕು, ಜಿಲ್ಲೆ: ಚಿತ್ರದುರ್ಗ, ಕರ್ನಾಟಕ–577558, ಮತ್ತು **ಪರಿಮಿತಿ: ಪೂರ್ವ:** ರಸ್ತೆ **ಪಶ್ಚಿಮ: ರಾಮಣ್ಣನ ಮನೆ S/o ಮುರಣ್ಣ ಉತ್ತರ: ರಂಗಮಂದಿರ ನಿವೇಶನ ದಕ್ಷಿಣ: ಚಿಕ್ಕಮ್ಮನ ಮನೆ**					
4	149816722	ಗೃಹ ಸಾಲ	1. ಕೆ.ಎಸ್. ಶಿಲ್ಪಾ 3. ಸುರೇಶ ಎಚ್	13.08.2026	ರೂ. 3,34,469.11/–
ಆಸ್ತಿ ವಿಳಾಸ: ಆಸ್ತಿಯ ಎಲ್ಲಾ ಭಾಗ ಮತ್ತು ವಿಭಾಗಗಳು ಆಸ್ತಿಯ ಸಂಖ್ಯೆ. 208, ಇ–ಸ್ವತ್ತು ಸಂಖ್ಯೆ. 151200601200300218, ಪೂರ್ವ–ಪಶ್ಚಿಮ ಅಳತೆ: 4.8768 ಮೀಟರ್ X ಉತ್ತರ–ದಕ್ಷಿಣ 10.3632 ಮೀಟರ್ = 50.53 ಚದರ ಮೀಟರ್, ನಿರ್ಮಿತ ವಿಸ್ತೀರ್ಣ 50.53 ಚದರ ಮೀಟರ್, ಗುರುಸಿದ್ದಾಪುರ ಗ್ರಾಮದಲ್ಲಿದೆ, ಜಗಳೂರು ತಾಲ್ಲೂಕು, ಜಿಲ್ಲೆ: ದಾವಣಗೆರೆ, ಕರ್ನಾಟಕ –577513, ಮತ್ತು **ಗಡಿಗಳು: ಪೂರ್ವ: ಅಂಜಿನಮ್ಮ ಮನೆ, ನಾಗರಾಜ ಪಶ್ಚಿಮ: ಹನುಮಂತಪ್ಪ ಮನೆ ಉತ್ತರ: ಖಾಲಿ ಸ್ಥಳ ದಕ್ಷಿಣ: ರಸ್ತೆ**					

ಮೇಲಿನ ಕೋಷ್ಟಕದಲ್ಲಿ ತೋರಿಸಿರುವ ವಿವರಗಳ ಪ್ರಕಾರ, ಅವುಗಳ ದಿನಾಂಕಗಳು ಮತ್ತು ಇತರ ವೆಚ್ಚಗಳು, ಶುಲ್ಕಗಳು ಇತ್ಯಾದಿಗಳಿಂದ ಒಪ್ಪಂದದ ಬಡ್ಡಿದರದೊಂದಿಗೆ, ಮೇಲಿನ ಪ್ರಕಟಣೆಯ ದಿನಾಂಕದಿಂದ 60 ದಿನಗಳ ಒಳಗೆ **IDFC FIRST ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್, IDFC ಬ್ಯಾಂಕ್ ಲಿಮಿಟೆಡ್ನೊಂದಿಗೆ ವಿಲೀನಗೊಂಡು ಪ್ರಸ್ತುತ IDFC ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂದು ಕರೆಯಲ್ಪಡುತ್ತದೆ)** ಗೆ ಮೊತ್ತವನ್ನು ಪಾವತಿಸಲು ನಿಮ್ಮನ್ನು ಇಲ್ಲಿ ಕೇಳಲಾಗಿದೆ. ಇಲ್ಲದಿದ್ದರೆ, ಕೆಳಗೆ ಸಹಿ ಮಾಡಿದವರು SARFAESI ಕಾಯ್ದೆಯ ಸೆಕ್ಷನ್ 13 (4) ಮತ್ತು ಸೆಕ್ಷನ್ 14 ರ ಅಡಿಯಲ್ಲಿ, ಮೇಲೆ ಉಲ್ಲೇಖಿಸಲಾದ ಅಡಮಾನದ ಆಸ್ತಿಗಳ ವಿರುದ್ಧ **IDFC FIRST ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್, IDFC ಬ್ಯಾಂಕ್ ಲಿಮಿಟೆಡ್ನೊಂದಿಗೆ ವಿಲೀನಗೊಂಡು ಪ್ರಸ್ತುತ IDFC ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂದು ಕರೆಯಲ್ಪಡುತ್ತದೆ)** ಗೆ ಬಾಕಿ ಇರುವ ಮೊತ್ತವನ್ನು ವಸೂಲಿ ಮಾಡಲು SARFAESI ಕಾಯ್ದೆಯ ಸೆಕ್ಷನ್ 13 (4) ಮತ್ತು ಸೆಕ್ಷನ್ 14 ರ ಅಡಿಯಲ್ಲಿ ಕ್ರಮಗಳನ್ನು ಪ್ರಾರಂಭಿಸಲು ನಿರ್ಬಂಧಿಸಲಾಗುತ್ತದೆ. ಇದಲ್ಲದೆ, ಈ ಕಾಯ್ದೆಯ ಸೆಕ್ಷನ್ 13 (13) ಅಡಿಯಲ್ಲಿ ಮಾರಾಟ/ಗುತ್ತಿಗೆ ಅಥವಾ ಬೇರೆ ರೀತಿಯಲ್ಲಿ ಸದರಿ ಸುರಕ್ಷಿತ ಸ್ವತ್ತುಗಳನ್ನು ವರ್ಗಾಯಿಸುವುದನ್ನು ನೀವು ನಿಷೇಧಿಸಲಾಗಿದೆ.

ಸಹಿ/– ಅಧಿಕೃತ ಅಧಿಕಾರಿ
IDFC ಫಸ್ಟ್ ಬ್ಯಾಂಕ್ ಲಿಮಿಟೆಡ್
(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್, ಐಡಿಎಫ್ಸಿ ಬ್ಯಾಂಕ್ ಲಿಮಿಟೆಡ್ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂದು ಕರೆಯಲ್ಪಡುತ್ತದೆ)

ದಿನಾಂಕ: 09.09.2026.
ಸ್ಥಳ: ಕರ್ನಾಟಕ.

Udayakala is published by K.N.Puttalingaiah from no 1576, Rame Gowda Building, 2nd floor, V.V.Road, Mandya-571 401 on behalf of Anikethana Publication and Printers edited by K.N.Puttalingaiah and Printed by M.N.S. PRINTERS PVT LTD. 345/4, Bhattarahalli Near K R Puram, RTO Old Madras Road, Bengaluru- 560049 and also printed at Elegant Offset Printers Pvt Ltd Sy no. 650/3, Uchagaon- Belgundi ByPass Road, Uchagaon, Belgaum -501128, Manipal Media Network Limited Udayavani Building, Udayavani Road Manipal – 576 104, Manipal Media Network Ltd. Sy No. 7/2, Plat No. Ca-3/1, 28(D) &29 Kapnoor 2nd Stage, Industrial Area, Kapnoor Village Kalaburagi Taluka Kalaburagi,ELEGANT OFFSET PRINTERSPVT LTD Plat No-33/1, 15/1 (Eastern Part) MT Sagar Industrial Estate Gokul Road Hubballi -580030, ELEGANT OFFSET PRINTERS PVT LTD, SHREE LAKSHMINARAYANA RICE MILL SHREE SHANKARMUTT ROAD, Shimoga- 577 201. All rights reserved. Reproduction in whole or in part without written permission is prohibited. RNI REG NO. 71090/97.Volume:30 Issue: 87